## ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು

**ಃಸಿಸಿ ಸಂಖ್ಯೆಃ 398/2018 ಃ**

ಫಿರ್ಯಾದುದಾರರು : ಸರ್ಕಾರದ ಪರವಾಗಿ
ಅಬಕಾರಿ ಪೋಲೀಸ್, ಬೇಲೂರು

ವಿರುದ್ಧ

ಆರೋಪಿಗಳು :

1. ದಾಕ್ಷಾಯಿಣಿ ಉಃರೇಣುಕಮ್ಮ ಕೋಂ
ಲೇಟ್ ಹುಚ್ಚೇಗೌಡ, 51 ವರ್ಷ,
ಅಡಮನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು.

\- - -

**ಃದೋಷಾರೋಪಣೆಃ**

ಶ್ರೀ ಪ್ರಸನ್ನ ಕುಮಾರ್ ಸಿ. ಬಿ.ಎ.ಎಲ್., ಎಲ್‌ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ-

1) ದಿನಾಂಕಃ.7.10.2017 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಕಸಬಾ ಹೋಬಳಿ ಅಡಮನಹಳ್ಳಿ ಗ್ರಾಮದಲ್ಲಿ ಆರೋಪಿತೆಯಾದ ನಿಮ್ಮ ವಾಸದ ಮನೆಗೆ ಹೊಂದಿಕೊಂಡಿರುವ ಬಚ್ಚಲು ಮನೆಯಲ್ಲಿ 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಬಾಲಿಯಲ್ಲಿ 05 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಹೊಂದಿದ್ದು ಹಾಗೂ 15 ಲೀಟರ್ ಸಾಮರ್ಥ್ಯದ 1 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ಬೆಲ್ಲದ ಕೊಳೆಯನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ, ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ಕರ್ನಾಟಕ ಅಬ್ಕಾರಿ ಕಾಯ್ದೆ ಕಲಂ. 13(1)((a) ಸಹವಾಚಕ ಕಲಂ 32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ.

2) ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುವ ಸಲುವಾಗಿ 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಬಾಲಿಯಲ್ಲಿ 05 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಹೊಂದಿದ್ದು ಹಾಗೂ 15 ಲೀಟರ್ ಸಾಮರ್ಥ್ಯದ 1 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ಬೆಲ್ಲದ ಕೊಳೆಯನ್ನು ಅಕ್ರಮವಾಗಿ ಸ್ವಾಧೀನ

ಹೊಂದಲು ನಿಮ್ಮ ವಾಸದ ಮನೆಯನ್ನು ಅನುವು ಮಾಡಿಕೊಂಡಿದ್ದು, ಅದರನ್ವಯ ಕರ್ನಾಟಕ ಅಭ್ಕಾರಿ ಕಾಯ್ದೆ ಕಲಂ. 38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ಆರೋಪಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 23.06.2022

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು</u>**

**<u>ಃಸಿಸಿ ಸಂಖ್ಯೆಃ 398ಃ 2018 ಃ</u>**

ಆರೋಪಿಯ ಹೆಸರು ಃ ದಾಕ್ಷಾಯಿಣಿ ಉಃ ರೇಣುಕಮ್ಮ
ತಂದೆಃಗಂಡನ ಹೆಸರು ಃ ಲೇಟ್ ಜುಬ್ಬೇಗೌಡ
ವಯಸ್ಸು ಃ 51 ವರ್ಷ
ವಾಸ ಸ್ಥಳ ಃ ಅಡಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 23.06.2022

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು